ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1991ವನ್ನು ತಿದ್ದುಪಡಿ ಮಾಡಿರುವಂತೆ ಅನುಮೋದಿಸುವುದು.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆಯಿತು

ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಬಿ.ಡಿ.ಎ ಮತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರಿಂದ ನೋಟಿಫಿಕೇಶನ್ ಆದಕೂಡಲೇ ಕೆಲವರು ಏನು ಮಾಡುತ್ತಾರೆ ಎಂದರೆ ಲಾಟ್‌ನಲ್ಲಿ ಹೋಗಿಬಿಟ್ಟು ಮಾರುತ್ತಾರೆ. ಇದನ್ನು ನಾವು ತಡೆಹಿಡಿಯಬೇಕಾಗುತ್ತದೆ. ಕೆಲವೊಂದು ಸಲ ಲಿಟಿಗೇಶನ್ ಬರುತ್ತದೆ. ಏಕೆಂದರೆ ಯಾರೋ ಗೊತ್ತಿಲ್ಲದವರು ಹೋಗಿಬಿಟ್ಟು ಪರ್ಚೇಸ್ ಮಾಡಿ ಅವರು ಸಹಿತ ತೊಂದರೆಗೆ ಒಳಗಾಗುತ್ತಾರೆ. ಮತ್ತೆ ಅನಧಿಕೃತ ಕಟ್ಟಡಗಳು ಸಹ ಇಂತಹ ಜಾಗದಲ್ಲಿ ಬರುತ್ತವೆ. ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರು ನೋಟಿಫಿಕೇಶನ್ ಮಾಡಿದಮೇಲೆ ಆ ಲ್ಯಾಂಡನ್ನು ಬೇರೆಯವರಿಗೆ ಮಾರುವುದಕ್ಕೆ ನಿರ್ಬಂಧವನ್ನು ತರುತ್ತಿದ್ದೇನೆ. ಇದರ ಪ್ರಕಾರ ರಿಜಿಸ್ಟ್ರೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ, ಈಗಾಗಲೇ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಇದು 1972ನೇ ಇಸವಿಯಿಂದ ಜಾರಿಯಲ್ಲಿದೆ. ಅದರ ಪ್ರಕಾರ ನಾವೂ ಇದನ್ನು ಮಾಡುತ್ತಿದ್ದೇನೆ.

ಉಪಾಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾಪವನ್ನು.....

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಇದನ್ನು ಮತಕ್ಕೆ ಹಾಕಬೇಡಿ. ನಾನು ಮಾತನಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷಿಣಿಯರೇ, ಈಗ ತಾನೇ ಮಾನ್ಯ ಸಭಾನಾಯಕರೂ, ಮುಖ್ಯಮಂತ್ರಿಗಳೂ ಆಶ್ವಾಸನೆ ಕೊಟ್ಟು ಹೋದರು. ಬಿ.ಡಿ.ಎ. ಬಗ್ಗೆ ಸಮಗ್ರವಾಗಿ ವಿಚಾರ ಮಾಡುತ್ತೇವೆ, ಇದನ್ನು ಪಾಸ್ ಮಾಡಿಕೊಡಿ ಎಂದು. ನಿಮ್ಮ ಲೆಜಿಸ್ಲೇಚರ್ ಪಾರ್ಟಿ ಸೆಕ್ರೆಟರಿಗಳಾದ ಅನಂತಕೃಷ್ಣರವರೇ ಕಳೆದ ಸಾರಿ ಮಾತನಾಡಿ, ಬಿ.ಡಿ.ಎ. ಬಗ್ಗೆ ಸಮಗ್ರವಾಗಿ ವಿಚಾರ ಮಾಡಬೇಕೆಂದೂ ಹೇಳಿದ್ದರು. ಬಿ.ಡಿ.ಎ.ಗೆ ಸಂಬಂಧಿಸಿದ ವಿಚಾರಗಳನ್ನು ಪೀಸ್‌ಮೀಲ್ ಆಗಿ ತೆಗೆದುಕೊಂಡು ಬರುತ್ತಿದ್ದೀರಿ. ಒಂದು ಆಶ್ವಾಸನೆಯನ್ನು ತಮ್ಮಿಂದ ಹೇಳುತ್ತೇನೆ. ಬಿ.ಡಿ.ಎ.ನಲ್ಲಿ ಸೈಟ್‌ಗಳಿಗಾಗಿ 20 ಕೋಟಿ ರೂಪಾಯಿ ಸಾರ್ವಜನಿಕರು ಇಟ್ಟಿದ್ದಾರೆ. ಇದು ನಮ್ಮ ಕಾಲದಲ್ಲಿ ಆಗಿರುವುದು, ನಿಮ್ಮ ಕಾಲದಲ್ಲಿ ಎಂದು ನಾನು ಅಕ್ಯೂಸ್ ಮಾಡುತ್ತಾ ಇಲ್ಲ. 7ನೇ ಬಾರಿ, 8ನೇ ಬಾರಿ ಪ್ರಯತ್ನ ಮಾಡಿದರೂ ಸೈಟುಗಳನ್ನು ಕೊಡದೆ 20 ಕೋಟಿ ರೂಪಾಯಿ ಡಿಪಾಸಿಟ್ ಇಟ್ಟುಕೊಂಡಿದ್ದೀರಿ. ಅದರ ಬಡ್ಡಿ ಆಧಾರದ ಮೇಲೆ ಅಲ್ಲಿರತಕ್ಕವರಿಗೆ ಸಂಬಳ ಕೊಡುತ್ತಿದ್ದೀರಿ. ಮೊದಲನೆಯದಾಗಿ ತಾವು ಇದನ್ನು ವಾಪಸ್ ಕೊಡತಕ್ಕ ಆಶ್ವಾಸನೆ ಕೊಡಿ. ಎರಡನೆಯದಾಗಿ ಸೈಟ್ ವಿಚಾರದಲ್ಲಿ ಬಿ.ಡಿ.ಎನಲ್ಲಿ ಈ ರೀತಿ ಆಗಬಾರದಿತ್ತು. ಇವತ್ತು ಒಬ್ಬರೇ ನಾಲ್ಕೈದು ಸೈಟುಗಳನ್ನು ತೆಗೆದುಕೊಂಡಿರುವವರೂ ಇದ್ದಾರೆ. 10ವರ್ಷದವರೆಗೆ ಬೇರೆಯವರು ತೆಗೆದುಕೊಳ್ಳಬಾರದು ಎಂಬ ನಿಬಂಧನೆ ಇದೆ. ಆದರೂ ಅನೇಕರು ತೆಗೆದುಕೊಂಡಿದ್ದಾರೆ ಮತ್ತು ಬೇಕಾದಷ್ಟು ವ್ಯವಹಾರ ನಡೆಸಿದ್ದಾರೆ. ಇಂಥವರಿಗೆ ಪರ್ಮಿಷನ್ ಸಿಕ್ಕು ಮನೆ ಕಟ್ಟಿಕೊಳ್ಳುವುದಕ್ಕಾಗುತ್ತಾ

ಇಲ್ಲ. ಬೇರೆಯವರ ಹೆಸರಿನಲ್ಲಿ ಸಾಲ ತೆಗೆದುಕೊಳ್ಳುವುದಕ್ಕಾಗುತ್ತಾ ಇಲ್ಲ, ಮನೆ ಕಟ್ಟುವುದಕ್ಕೆ ಆಗುತ್ತಾ ಇಲ್ಲ, ಇಂಥಾದ್ದನ್ನು ಏನು ಮಾಡುತ್ತೀರಿ. ಅದಕ್ಕೆ ಸಮಗ್ರವಾಗಿ ವಿಚಾರ ಮಾಡಿ, ಯೋಚನೆ ಮಾಡಿ, ಬಿಲ್ಲನ್ನು ಇಂಟ್ರಡ್ಯೂಸ್ ಮಾಡಬಾರದೇ ಎಂದು ನನ್ನ ಯೋಚನೆ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಸಿಂಧ್ಯರವರು ಹೇಳಿದಹಾಗೆ, ಇದರಲ್ಲಿ ಮುಖ್ಯ ವಿಚಾರ ಎಂದರೆ, ಸೈಟುಗಳಿಗೆ ಅಪ್ಲಿಕೇಷನ್ ಕಾಲ್ಔರ್ ಮಾಡುತ್ತೇವೆ. ಅವರಿಗೆ ಸೈಟು ಕೊಡುವುದಕ್ಕಾಗುತ್ತಾ ಇಲ್ಲ. ಇದು ಬಿ.ಡಿ.ಎ.ನಲ್ಲಿ ಆಗುತ್ತಾ ಬಂದಿದೆ. ಒಂದು ಸಾರಿ ನೋಟಿಫಿಕೇಶನ್ ಮಾಡಿದ ಕೂಡಲೇ ಏನು ಮಾಡುತ್ತಾರೆಂದು ಹೇಳಿದರೆ, ಲ್ಯಾಂಡ್‌ವೋನರಗಳಿಗೆ ಗೊತ್ತಿರುವುದಿಲ್ಲ, ಕೆಲವರು ಹೊಸದಾಗಿ ಪವರ್ ಆಫ್ ಅಟಾರ್ನಿ ಮಾಡಿಕೊಳ್ಳುತ್ತಾರೆ, ಬೇರೆಯವರು ತೆಗೆದುಕೊಳ್ಳುವವರು, ಪವರ್ ಆಫ್ ಅಟಾರ್ನಿ ಬರೆಸಿಕೊಂಡು ಎಲ್ಲಾ ತೆಗೆದುಕೊಂಡು ಹೋಗಿ, ಸಬ್‌ರಿಜಿಸ್ಟಾರ್ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಮಾಡುತ್ತಾರೆ. ಪರ್ಚೇಸ್ ಮಾಡುವವರಿಗೂ ಗೊತ್ತಿರುವುದಿಲ್ಲ, ನೋಟಿಫಿಕೇಶನ್ ಆಗಿದೆ ಎಂದು ಗೊತ್ತಿರುವುದಿಲ್ಲ, ಅವರೂ ಸಹಿತ ಹಣ ಕೊಡುತ್ತಾರೆ. ಈ ಬಿಲ್ಲಿನ ಉದ್ದೇಶ ಎಂದರೆ, ಯಾವುದಾದರೂ ನೋಟಿಫಿಕೇಷನ್ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರು ಮಾಡಿದರೆ, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಮಾಡುವುದಕ್ಕೆ ಅಲೋ ಮಾಡುವುದಿಲ್ಲ. ಪರ್ಚೇಸ್ ಮಾಡುವವರಿಗೂ ದುಡ್ಡು ಹಾಳಾಗುವುದಿಲ್ಲ. ಲ್ಯಾಂಡ್‌ಫೋನರುಗಳಿಗೂ ತೊಂದರೆ ಆಗುವುದಿಲ್ಲ. ಮತ್ತೆ ಆದಷ್ಟು ಬೇಗನೆ ಸೈಟು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಒಳ್ಳೆಯ ಉದ್ದೇಶದಿಂದಲೇ ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೇವೆ. ಆದ್ದರಿಂದ 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾಪ ಏನೆಂದರೆ, 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 11ರವರೆಗೆ

ಉಪಾಧ್ಯಕ್ಷರು : ಖಂಡ 2 ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ಪ್ರಥಮ ಖಂಡ, ಹೆಸರು, ಅವತರಣಿಕೆಗಳು ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು.

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ಈ ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷಣೆಯವರೇ, 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು..

ಉಪಾಧ್ಯಕ್ಷರು: ಈಗ ಈ ಮನೆಯ ಕಲಾಪಗಳನ್ನು ಮುಂದೂಡಿ, ಮತ್ತೆ 2.30ಕ್ಕೆ ಸೇರಲಾಗುವುದು.

ಸದನವು ಮಧ್ಯಾಹ್ನ 1.35ಕ್ಕೆ ಮುಕ್ತಾಯವಾಗಿ ಮತ್ತೆ 2-30ಕ್ಕೆ ಸೇರಲು ನಿಶ್ಚಯಿಸಿತು.

ಸದನವು ಪುನಃ 2ಗಂಟೆ 55ನಿಮಿಷಗಳಿಗೆ ಸಮಾವೇಶಗೊಂಡಿತು)

ಉಪಾಧ್ಯಕ್ಷರು: (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅಧ್ಯಕ್ಷ ಪೀಠದಲ್ಲಿದ್ದರು.

ಶಾಸನ ರಚನಾ ಕಾರ್ಯಕಲಾಪಗಳು

ಪರ್ಯಾಲೋಚನ ಪ್ರಸ್ತಾವ

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) : ಉಪಾಧ್ಯಕ್ಷಣೀಯರೇ, 1991ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

+ ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷಿಣೆಯವರೆ, ಈ ಬಿಲ್ಲಿನ ವಿಷಯದಲ್ಲಿ ಅನೇಕ ದಿವಸಗಳ ಹಿಂದೆ ಒಂದು ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿ ಶ್ರೀ ಅಜ್ಜಿಬಾಳ ಹೆಗಡೆಯವರ ನೇತೃತ್ವದಲ್ಲಿ ಕಮಿಟಿ ಪ್ರಾರಂಭವಾಗಿತ್ತು. ಆಮೇಲೆ ಅನೇಕ ಸಲ ಸದನದ ಸಮಿತಿಯ ಸದಸ್ಯರ ಎದುರಿಗೆ ಸಹ ಚರ್ಚಿಯಾಗಿದೆ. ಚರ್ಚಿಯ ನಂತರ ಈ ಬಿಲ್ಲನ್ನು ಮಂಡಿಸಲಾಗಿದೆ. ಇದರಲ್ಲಿ ಪ್ರಾಮುಖ್ಯವಾಗಿ ರೈತಾಪಿ ಹಿತದ ಸಲುವಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ವಿವರಣೆ ಮಾಡಲಾಗಿದೆ. ಮಾರ್ಕೆಟ್ ಕಮಿಟಿಯ ಹಣವನ್ನು ರೈತರ ಉಪಯುಕ್ತತೆಗೆ ಬೇಕಾದಂತಹ ರಸ್ತೆಯಿರಲಿ, ಮತ್ತಾವ ಸಾಧನೆಗಳೇ ಇರಲಿ ಅವುಗಳನ್ನು ಸರ್ಕಾರದವರು ಫ್ರಿಸ್ಕ್ರೈಬ್ ಮಾಡುವ ರೀತಿಯಲ್ಲಿ ಮಾಡಬೇಕೆನ್ನುವ ರೀತಿಯಲ್ಲಿ ಇದರಲ್ಲಿ ಸೇರಿಸಲಾಗಿದೆ. ಆಗ್ರೋಬೇಸ್ಡ್ ಇಂಡಸ್ಟ್ರಿಗಳನ್ನು ಎಲ್ಲಿ ಪ್ರಾರಂಭ ಮಾಡುತ್ತಾರೆ ಅಂತಹ ಸೊಸೈಟಿಗಳಿಗೆ ಮಾರ್ಕೆಟ್ ಕಮಿಟಿಗಳ ಹಣವನ್ನು ತೊಡಗಿಸುವುದಕ್ಕೆ ಸೇವಾ ರೂಪದಿಂದ ಸಾಲದ ರೂಪದಲ್ಲಿ ಹಣವನ್ನು ತೊಡಗಿಸುವುದಕ್ಕೆ ಅನುಕೂಲವಾಗುವಂತೆ ಇದರಲ್ಲಿ ಅಳವಡಿಸಲಾಗಿದೆ. ಅದೂ ಅಲ್ಲದೆ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಹಣದ ಅಭಾವದಿಂದ ಬಳಲುತ್ತಿರುವಾಗ ಇಂತಹ ತಾಲ್ಲೂಕು ಮಾರ್ಕೆಟ್ ಸೊಸೈಟಿಗಳಿಂದ ನೇರವಾಗಿ ಮಾರ್ಕೆಟ್ ಕಮಿಟಿಗಳು ತಮ್ಮ ಫಂಡ್ಸ್‌ನಿಂದ ಸಾಲದ ರೂಪದಲ್ಲಿ ಹಣವನ್ನು ತೆಗೆದುಕೊಂಡು ಉಪಯುಕ್ತವಾಗುವ ರೀತಿಯಲ್ಲಿ ಮಾಡಲಾಗಿದೆ. ಅದು ಅಲ್ಲದೆ ಹೊಸದಾಗಿ ಇದರ ವ್ಯಾಪ್ತಿಯಲ್ಲಿ ಬರುವಂತಹ ಮಾರ್ಕೆಟ್ ಕಮಿಟಿಯ ಆಡಳಿತ ಅವಧಿಯನ್ನು ಐದು ವರ್ಷ ಮಾಡಲಾಗಿದೆ. ಆ ಆಡಳಿತ ಸಮಿತಿಯಲ್ಲಿ ವ್ಯವಸಾಯಗಾರರು ಏಳು ಜನರು ಇದ್ದದನ್ನು ಇವತ್ತಿನ ದಿವಸ ಹೆಚ್ಚು ಜನರು